ಕರ್ನಾಟಕ ಪರೀಕ್ಷಾ ಪ್ರಾಧಿಕಾರ
KARNATAKA EXAMINATIONS AUTHORITY
KEA

ಸಂಖ್ಯೆ. ಇಡಿ/ಕೆಇಎ/ಸಿಇಟಿ 2016/16-17 29.06.2016

ಪ್ರಾಂಶುಪಾಲರು

_________________

_________________

ಮಾನ್ಯರೆ,

ವಿಷಯ: 2016-17ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಾತಿ ಸಮಯದಲ್ಲಿ ಮೂಲ ದಾಖಲೆಗಳಿಗೆ ಒತ್ತಾಯ ಮಾಡದಂತೆ ಕ್ರಮ ಕೈಗೊಳ್ಳು ಕುರಿತು

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ. ಇಡಿ/49/ಟಿಇಸಿ/2016(ಭಾ) ದಿ. 17.06.2016

\-\-\-\-\-\-\-\-\-\-\-\-

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ವೃತ್ತಿಪರ ಕೋರ್ಸುಗಳಲ್ಲಿ ಹಂಚಿಕೆ ಪಡೆದ ವಿದ್ಯಾರ್ಥಿಗಳು ಕೆಇಎಗೆ ನಿಗಧಿತ ಶುಲ್ಕ ಪಾವತಿ ಮಾಡಿ ಸಂಬಂಧಿಸಿದ ಕಾಲೇಜುಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಮೂಲ ದಾಖಲೆಗಳನ್ನು ಪಡೆಯುತ್ತಿರುವುದು ಕಳೆದ ಕೆಲವು ವರ್ಷಗಳಿಂದ ರೂಢಿಯಲ್ಲಿರುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ವಿವಿಧ ಕೋರ್ಸುಗಳ ಸೀಟು ಹಂಚಿಕೆಯು ಜೂನ್‌ನಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೂ ಮುಂದುವರೆಯುತ್ತಿದ್ದು ವಿವಿಧ ಹಂಚಿಕೆ ಸುತ್ತುಗಳಲ್ಲಿ ವಿದ್ಯಾರ್ಥಿಗಳು ಬೇರೆ ಬೇರೆ ಕೋರ್ಸು/ ಕಾಲೇಜುಗಳಿಗೆ ತಮ್ಮ ಇಚ್ಛೆಯನುಸಾರ ಹಂಚಿಕೆ ಪಡೆದು ಕಾಲೇಜಿಗೆ ಪ್ರವೇಶ ಪಡೆಯುವಾಗ ಮೊದಲು ಪ್ರವೇಶ ಪಡೆದ ಕಾಲೇಜಿನಿಂದ ಮೂಲ ದಾಖಲೆಗಳನ್ನು ಹಿಂದೆ ಪಡೆಯಲು ಸಾಕಷ್ಟು ತೊಂದರೆಗಳಾಗಿರುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. 2016-17ನೇ ಸಾಲಿನಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ನೀಟ್ ಪರೀಕ್ಷೆಯು ಜುಲೈ 24ರಂದು ನಡೆಯಲಿದ್ದು, ಫಲಿತಾಂಶವು ಆಗಸ್ಟ್ ತಿಂಗಳಲ್ಲಿ ಬರುವುದರಿಂದ ಸೀಟು ಹಂಚಿಕೆ ಪ್ರಕ್ರಿಯೆಯು ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೂ ಮುಂದುವರೆಯುವ ಸಾಧ್ಯತೆ ಇರುತ್ತದೆ. ಇದರಿಂದ ವಿದ್ಯಾರ್ಥಿಗಳು ಕೆಇಎದ ಮೂಲಕ ಮೊದಲನೇ ಸುತ್ತಿನಲ್ಲಿ ಸೀಟು ಹಂಚಿಕೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದರೂ ನೀಟ್ ಫಲಿತಾಂಶದ ಪರಿಣಾಮವಾಗಿ ಮೊದಲಿನ ಕಾಲೇಜುಗಳ ಸೀಟುಗಳನ್ನು ರದ್ದುಗೊಳಿಸಿ ಮೂಲ ದಾಖಲೆಗಳನ್ನು ಪಡೆದು ನೀಟ್/ಕೆಇಎ ಮೂಲಕ ಸೀಟು ಪಡೆದ ಕಾಲೇಜಿಗೆ ಪ್ರವೇಶ ಪಡೆಯಬೇಕಾಗಿರುತ್ತದೆ. ಈ ರೀತಿ ಕೊನೆಯ ಸುತ್ತಿನಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಕಾಲೇಜುಗಳಿಗೆ ಪ್ರವೇಶ ಪಡೆಯಲು ಇರುವ ಕಾಲಾವಧಿ ತುಂಬಾ ಕಡಿಮೆಯಿರುತ್ತದೆ. ಈ ಕಾರಣದಿಂದ 2016-17ನೇ ಸಾಲಿಗೆ ಸಂಬಂಧಿಸಿದಂತೆ ಕಾಲೇಜುಗಳಲ್ಲಿ ಕೆಇಎ ಮೂಲಕ ಸೀಟು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಯಾವುದೇ ಮೂಲ ದಾಖಲೆಗಳಿಗೆ ಒತ್ತಾಯ ಮಾಡದೆ ಕೇವಲ ದೃಢೀಕೃತ ದಾಖಲೆಗಳ ಆಧಾರದ ಮೇಲೆ ಪ್ರವೇಶ ನೀಡಬೇಕೆಂದು ಸೂಚಿಸಿದೆ.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
18th Cross, Sampige Road, Malleshwaram, Bangalore – 560 012.
Phone: 080-2356 4583, 2336 1786, Fax: 080-2346 1576
Website : http://kea.kar.nic.in e-mail : keauthority-ka@nic.in

ಮುಂದುವರೆದು ಕೆಇಎ ಮತ್ತು ನೀಟ್ ಪರೀಕ್ಷೆಯ ಫಲಿತಾಂಶದ ನಂತರ ನಡೆಯುವ ಪ್ರವೇಶ ಪ್ರಕ್ರಿಯೆಗಳು ಪೂರ್ಣವಾಗಿ ಮುಕ್ತಾಯವಾದ ನಂತರ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಂದ ನೇರವಾಗಿ ಮೂಲ ದಾಖಲೆಗಳನ್ನು ಪಡೆದು ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲು ಸೂಚಿಸಿದೆ.

ಇದೇ ವಿಷಯವಾಗಿ ಇಂಜಿನಿಯರಿಂಗ್ ಕಾಲೇಜಿಗಳಿಗೆ ಸಂಬಂಧಿಸಿದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಭಂಧಪಟ್ಟ ಎಲ್ಲಾ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಆದೇಶದಲ್ಲಿ ತಿಳಿಸಲಾಗಿರುತ್ತದೆ. .

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿಯನ್ನು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಉಪಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ
3) ಉಪಕುಲಪತಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು
4) ಕಛೇರಿ ಪ್ರತಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 49 ಟಿಇಸಿ 2016(ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17-06-2016.

ಇವರಿಂದ:-
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು-560001.

ಇವರಿಗೆ:-
ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೇ,

ವಿಷಯ:- 2016-17ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಾತಿ ಕುರಿತು.

ಉಲ್ಲೇಖ:- ತಮ್ಮ ಅರೆ ಸರ್ಕಾರಿ ಪತ್ರ ಸಂ: ಇಡಿ / ಕೆಇಎ/ಆಡಳಿತ/ 22/2015-16, ದಿ:11-06-2016

>>><<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರೆ ಸರ್ಕಾರಿ ಪತ್ರದ ಕುರಿತು ಪರಿಶೀಲಿಸಲಾಯಿತು. ಅದರಂತೆ 2016-17ನೇ ಸಾಲಿಗೆ ಸಂಬಂಧಿಸಿದಂತೆ ಮಾತ್ರ ಯಾವುದೇ ಕಾಲೇಜಿನವರು ಸಿಇಟಿ ಪ್ರವೇಶ ಪತ್ರವನ್ನು ಮಾತ್ರ ಪರಿಶೀಲಿಸಿ, ಸಂಬಂಧಿಸಿದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ಪ್ರವೇಶ ನೀಡುವಂತೆ ಮತ್ತು ಈ ಸಂಬಂಧ ಮೂಲ ದಾಖಲೆಗಳನ್ನು ಸಲ್ಲಿಸುವಂತೆ ಒತ್ತಾಯಿಸದಿರಲು ಎಲ್ಲಾ ವೃತ್ತಿಪರ ಕಾಲೇಜುಗಳಿಗೆ ಸೂಕ್ತ ಸುತ್ತೋಲೆಯನ್ನು ಪ್ರಾಧಿಕಾರದವತಿಯಿಂದಲೇ ಕೂಡಲೇ ಹೊರಡಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

S. Venkatesh

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

1663 25/6/16

ಪ್ರತಿ:

1) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 49 ಟಿಇಸಿ 2016(ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17-06-2016.

ಇವರಿಂದ:-

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು-560001.

ಇವರಿಗೆ:-

ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,
ಜ್ಞಾನಸಂಗಮ ಬೆಳಗಾಂ.

ಮಾನ್ಯರೇ,

ವಿಷಯ:- 2016-17ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಾತಿ ಕುರಿತು.

ಉಲ್ಲೇಖ:- ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅರೆ ಸರ್ಕಾರಿ ಪತ್ರ ಸಂ: ಇಡಿ/ ಕೆಇಎ/ಆಡಳಿತ/ 22/2015-16, ದಿ:11-06-2016

>>><<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ 2016-17ನೇ ಸಾಲಿನ ವೈದ್ಯಕೀಯ/ದಂತ ವೈದ್ಯಕೀಯ ಕೋರ್ಸುಗಳಿಗೆ ಸಿಇಟಿ ರ್‍ಯಾಂಕ್ ಹಾಗೂ ಎನ್.ಇ.ಇ.ಟಿ ರ್‍ಯಾಂಕ್ ಪರಿಗಣಿಸಿ ಸೀಟು ಹಂಚಿಕೆ ಮಾಡಲು ಮನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವಿದ್ದು, ಎನ್.ಇ.ಇ.ಟಿ ಪರೀಕ್ಷೆಯು ದಿ:24-07-2016ರಂದು ನಡೆಯಲಿದ್ದು, ದಿ:18-08-2016ರಂದು ಫಲಿತಾಂಶ ಹೊರಬೀಳಲಿದೆ. ಎನ್.ಇ.ಇ.ಟಿ ಪರೀಕ್ಷೆ ಫಲಿತಾಂಶದ ನಂತರ ಆಲ್ ಇಂಡಿಯಾ ಕೋಟಾ ಸೀಟುಗಳು ಅಲ್ಲದೆ ಕಾಮೆಡ್-ಕೆ ಕೌನ್ಸಿಲ್ ಮೂಲಕ ಪಡೆದ ಸೀಟುಗಳಿಗೆ ವೈದ್ಯಕೀಯ ಪ್ರವೇಶ ಪಡೆಯುವಾಗ ಸಿಇಟಿ ಮೂಲಕ ಪಡೆದ ಇಂಜಿನಿಯರಿಂಗ್/ ಇತರೆ ಕೋರ್ಸುಗಳ ಸೀಟುಗಳು ರದ್ದಾಗುತ್ತವೆ.

ಸಿಇಟಿ ರ್‍ಯಾಂಕ್ ಆಧಾರದ ಮೇಲೆ ಇಂಜಿನಿಯರಿಂಗ್ ಸೀಟುಗಳ ಹಂಚಿಕೆಯ ಪ್ರಕಾರ ಪ್ರವೇಶ ಪಡೆಯುವಾಗ ವಿದ್ಯಾರ್ಥಿಗಳಿಂದ ಮೂಲ ದಾಖಲೆಗಳನ್ನು ಕಾಲೇಜಿನವರು ಪಡೆಯುತ್ತಾರೆ. ನಂತರ ಇಂಜಿನಿಯರಿಂಗ್ ಸೀಟುಗಳು ರದ್ದು ಮಾಡುವಾಗ ಬಹಳಷ್ಟು ಖಾಸಗಿ ಕಾಲೇಜುಗಳಲ್ಲಿ ಮೂಲ ದಾಖಲೆಗಳನ್ನು ಹಿಂತಿರುಗಿಸದೆ ಅನಗತ್ಯ ತೊಂದರೆ ನೀಡುತ್ತಿರುವ ಬಗ್ಗೆ ಹಿಂದಿನ ವರ್ಷಗಳಲ್ಲಿ ಬಹಳಷ್ಟು ದೂರುಗಳು ಬಂದಿರುತ್ತದೆ. ಈ ವರ್ಷ ಎನ್.ಇ.ಇ.ಟಿ ಪರೀಕ್ಷೆಯ ಆದೇಶದ ಹಿನ್ನೆಲೆಯಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣವಾಗುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದ 2016-17ನೇ ಸಾಲಿಗೆ ಸಂಬಂಧಿಸಿದಂತೆ ಮಾತ್ರ ಯಾವುದೇ ಕಾಲೇಜಿನವರು ಸಿಇಟಿ ಪ್ರವೇಶ ಪತ್ರವನ್ನು ಮಾತ್ರ ಪರಿಶೀಲಿಸಿ ಅದರ ಆಧಾರದ ಮೇಲೆ ಸಂಬಂಧಿಸಿದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ಪ್ರವೇಶ ನೀಡುವಂತೆ ಮತ್ತು ಮೂಲ ದಾಖಲೆಗಳನ್ನು ಒತ್ತಾಯಿಸಬಾರದೆಂದು ಎಲ್ಲಾ ಕಾಲೇಜುಗಳಿಗೆ ಸೂಕ್ತ ಸುತ್ತೋಲೆ ಹೊರಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ಪಡೆದ ನಂತರ ಪ್ರವೇಶದ ಅನುಮೋದನೆ ಪಡೆಯಲು ಮೂಲ ದಾಖಲೆಗಳನ್ನು ವಿಟಿಯುಗೆ ಕಳುಹಿಸುವ ಪದ್ಧತಿ ಇರುತ್ತದೆ. ಪ್ರಸ್ತುತ 2016-17ನೇ ಸಾಲಿಗೆ ಸಂಬಂಧಿಸಿದಂತೆ ಮಾತ್ರ ವಿಟಿಯುಗೆ ಎನ್.ಇ.ಇ.ಟಿ ಪ್ರವೇಶ ಮುಗಿದ ನಂತರ ಸಂಬಂಧಿಸಿದ ಕಾಲೇಜುಗಳು ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ಪಡೆದು ಅನುಮೋದನೆ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ಎಲ್ಲಾ ಕಾಲೇಜುಗಳಿಗೆ ಈ ಬಗ್ಗೆ ವಿಟಿಯುದಿಂದ ನಿರ್ದೇಶನ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪ್ರತಿ:

1) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.